ನೋಟಿಸ್.

ತಾರೀಖು 27ನೇ ಏಪ್ರೆಲ್ 1903.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ; ಈ ಕೆಳಗೆ ನಮೂದಿಸಿರುವ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಡಿಪೋದಲ್ಲಿ ಚೌಬೀನವನ್ನು ಈ ಕೆಳಗೆ ನಮೂದಿಸಿದ ತಾರೀಖಿನಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರಿಂದ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುವುದು. ಹರಾಜು ಮಧ್ಯಾನ್ಹ 2 ಘಂಟೆಗೆ ಸುರು ಮಾಡಲ್ಪಡುತ್ತೆ.

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ಸಾಗುವಾನಿ ನಾಟ.		ಮತ್ತಿ ನಾಟ.		ನಂದಿನಾಟ.		ಬೀಟೆನಾಟ.		ಕಾಡುಜಾತಿ ನಾಟಾ.		ಷರಾ.
			ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	
1	ಹೊಳಲಕೆರೆ ರೈಲ್ವೆ ಸ್ಟೇರ್ಡ್.	28- 5-1903	30	879	7	171	3	77	3	73	5	131	ಸ್ವಲ್ಪ ಹೆಚ್ಚು ಕಡಿಮೆ.

ಹರಾಜು ಷರತ್ತು:—1895ನೇ ಇಸವಿ ಏಪ್ರೆಲ್ 25ನೇ ಮುಕ್ತಂ ನಂಬರ್ 15ನೇ ಮೈಸೂರು ಗೆಜೆಟಿನಲ್ಲಿ ಘಾಯಿಷ್ಮಾಗಿರುವ 1895ನೇ ಇಸವಿ ಮಾರ್ಚಿ 15ನೇ ಮುಕ್ತಂ ನಂಬರು 15229—R. F. 155—92ನೇ ನೋಟಿಫಿಕೇಷನ್ ನೋಡಬೇಕು.

ಕೆ. ಚಾಮಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 22ನೇ ಏಪ್ರೆಲ್ 1903.

ಕೋಲಾರ ತಾಲ್ಲೂಕಿಗೆ ಸೇರಿದ ಬಾಜೂದಲ್ಲಿ ನಮೂದಿಸಿರುವ ಗ್ರಾಮಗಳನ್ನು ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ಕೋಲಾರ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ ಬಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಿಸುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಕೋಲಾರ ತಾಲ್ಲೂಕು.
ಸುಗಟೂರು ಹೋಬಳಿ.
ಜೋಡಿ ಉಪ್ಪುಕುಂಟೆ—17ನೇ ಜೂನ್ 1903.
ಜೋಡಿ ಹನುಮಂತಪುರ—19ನೇ ಜೂನ್ 1903.

(ಹಚ್ಚು ತಪಶೀಲ್ ಬಗ್ಗೆ 30—4—1903ನೇ ಮುಕ್ತಂ 17ನೇ ನಂಬರ್ ಮೈಸೂರು ಗೆಜೆಟಿನ IIನೇ ಭಾಗದ 184—185ನೇ ನಂಬರ್ ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್,
ಡಿಪ್ಯೂಟಿ ಕಮಿಷನರ್.

ಇಸ್ತಿಹಾರ್.

ತಾರೀಖು 17ನೇ ಏಪ್ರೆಲ್ 1903.

ತುಮಕೂರು ಡಿಸ್ಟ್ರಿಕ್ಟು 2ನೇ ಜನರಲ್ ಅ॥ ಕಮಿಷನರ್ ಮತ್ತು 1ನೇ ಕ್ಲಾಸು ಮ್ಯಾಜಿಸ್ಟ್ರೇಟ್ ಕೋರ್ಟು.

1901—1902ನೇ ಇಸವಿ ಕ್ರಿಮಿನಲ್ ಮಿಸಲೇನಿಯಸ್ ಮೊ॥ ನಂ. 78.

ಫಿರ್ಯಾದಿ. ಸರ್ಕಾರ

ಅಪರಾಧಿ. ಬೂಸಿಗಾ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—ಮೇಲ್ಕಂಡ ಮೊಕದ್ದಮಾ 1ನೇ ಅಪರಾಧಿ ತುರ್ವೇಕೆರೆ ಗ್ರಾಮದ ಬೂಸಿಗಾ ಎಂಬುವನ ಮನೆಯಲ್ಲಿ ಇದಕ್ಕೆ ಲಗತ್ತು ಇರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಮಾಲುಗಳು 1902ನೇ ಇಸವಿ ಮೇ 3ನೇ ಮುಕ್ತಂನಲ್ಲಿ ದೊರತದ್ದೆಂದು ತುರ್ವೇಕೆರೆ ಸಬ್ ತಾಲ್ಲೂಕು ಪೊಲೀಸಿನವರಿಂದ ಹಾಜರಾಗಲ್ಪಟ್ಟಿತು.

ಈ ಮೊಕದ್ದಮಾ ವಿಚಾರಣೆ ನಡಿಸಿದ್ದರಲ್ಲಿ ಈ ಮಾಲುಗಳನ್ನು ಸದರೀ ಬೂಸಿಗನು ನ್ಯಾಯವಾಗಿ ಸಂಪಾದಿಸಿದ್ದಲ್ಲವೆಂತಲೂ ಚೋರೀ ಮಾಲುಗಳಾಗಿರಬಹುದೆಂದು ಗುಮಾನೀ ತೋರಿಬಂದಿರುತ್ತೆ. ಆದ್ದರಿಂದ ಈ ಮಾಲುಗಳಿಗೆ ವಾರಸ್ದಾರರು ಯಾರಾದರೂ ಇದ್ದಲ್ಲಿ ಈ ಇಸ್ತಿಹಾರ್ ತಾರೀಖು ಲಾಗಾಯತು ಆರು ತಿಂಗಳು ಒಳಗಾಗಿ ಈ ಕೋರ್ಟು ರೂಬರೂ ಹಾಜರಾಗಿ ತಮ್ಮ ವಾರಸನ್ನು ದೃಢಪಡಿಸಿಕೊಟ್ಟು ಮಾಲುಗಳನ್ನು ಪಡಿಯಬಹುದು.

ತುಮಕೂರು ಡಿ॥ 2ನೇ ಜನರಲ್ ಅ॥ ಕಮಿಷನರ ಮತ್ತು 1ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟು—ಕ್ರಿಮಿನಲ್ ಮಿಸಲೇನಿಯಸ್ ಕೇಸ್ ನಂಬರು 8 (1901—1902).

ಈ ಮೊಕದ್ದಮೇಲಿ ಕೋರ್ಟ್ ರೂಬರೂಬ್ ಹಾಜರಾದ ಮಾಲುಗಳ ತಪಸೀಲು ತೋರಿಸುವ ಲೀಸ್ಟ್.

1	ಕಂಚಿನ ಲೋಟಾದಲ್ಲಿರುವ ನಗದು 238--0--0 ರೂ ಪಾಯಿಗಳು (ಜುಡಿಷಲ್ ಡಿಪಾಜಿಟ್‌ನಲ್ಲಿದೆ).		
2	ಚಿನ್ನದ ವಾಲೆ ಜೊತೆ	...	1
3	ಚಿನ್ನದ ತಾಳಿ ಬಟ್ಟುಗಳು	..	3
4	ಚಿನ್ನದ ಬಾವಲಿ ಜೊತೆ	..	1
5	ಬಿಳಿ ಚಿನ್ನದ ಬಾವಲಿ	..	1
6	ಚಿನ್ನದ ಮೂಗನತ್ತು	..	1
7	ಕೆಂಪುಕಲ್ಲು ಮೂಗನತ್ತು	....	1
8	ಹತ್ತು ಕಡಕು ಜೊತೆ	..	1
9	ಪಳ್ಳಿ ಮುರು ಜೊತೆ	..	1
10	ಚಿನ್ನದ ಸಣ್ಣಗುಂಡುಗಳು	..	152
	ಅದರಲ್ಲಿ ಗುಂಡಿನ ತಾತಿಗಳು	...	2
	ಬಿಳಿ ಹರಳುತಾಳಿ	..	1
	ಕೆಂಪುಕಲ್ಲು ತಾಳಿ	..	1
11	ಭಂಗಾರದ ಗಂಟಿ ಜೊತೆ 3, ವಕ್ಕಲಿಗರು ಕಿವಿಗೆ ಹಾಕ ತಕ್ಕದ್ದು.		
12	ಭಂಗಾರದ ಅರೆಮುರ	...	1
13	ಭಂಗಾರದ ಜಪ್ಪು ಗುಂಡು	...	1
14	ಭಂಗಾರದ ಗಿಣಿ ಮುರು ಮುತ್ತು ಸಮೇತ		1
15	ಚಿನ್ನದ ಮುರುಗಳು	...	3
16	ಚಿನ್ನದ ತಾಳಿ ಮುರಕು	...	1
17	ಬೆಳ್ಳಿ ಮುರ	..	1
18	ಪಳ್ಳಿ ಉಂಗರ	.	1
19	ಬೆಳ್ಳಿ ಭಂಗಾರದ ತಾಳಿ	...	1
20	ನಗದು ರೂಪಾಯಿಗಳು 5, ಜುಡಿಷಲ್ ಡಿಪಾಜಿಟ್‌ನಲ್ಲಿಲ್ಲ.		
21	ಸಣ್ಣ ತಾಂಬ್ರದಕಾಸು	..	1
22	ಹೊಂಬಾಯಿ ಮುತ್ತುಗಳು	..	16
23	ಪಳ್ಳಿಬಾಬತು ಜೀವಿನಕಾಯಿ ತಾತಿ	..	1
24	ಪಳ್ಳಿ ಕರಡಿಗೆ ಬಿರಟೆನಹ		
25	ಪಳ್ಳಿ ಚಕ್ಕಿರತಕ್ಕ ಚವಲಿತುಂಬು	..	1
26	ಬೆಳ್ಳಿ ಸಾಬಾ ಚವಲಿತುಂಬು	...	
27	ಪಳ್ಳಿ ಛತ್ರಿ	..	
28	ಪಳ್ಳಿ ನಾಗಮುರಿ	..	
29	ಪಳ್ಳಿ ಮುದ್ರೆ ಉಂಗರ	..	
30	ಪಳ್ಳಿ ಉಂಗರಗಳು	...	2
31	ಪಳ್ಳಿ ಪಾಪಟಿ ಉಂಗರ	...	1
32	ಕಾಲುಪಿಲ್ಲಿ ಜೊತೆ	....	2
33	ಪಳ್ಳಿ ಕಾಲುಸುತ್ತು	...	1
34	ಬೆಳ್ಳಿ ಸರಪಣಿಗಳು ಕೊಕ್ಕಿ ಸಮೇತ	..	6
35	ಬೆಳ್ಳಿ ಜೂರುಗಳು		
36	ಹೊಂಬಾಯಿ ಮುತ್ತುಗಳು	...	21
37	ಮುಚ್ಚಳ ಸಮೇತ ಇರತಕ್ಕ ತಾಂಬ್ರದ ಭರಣಿಯಲ್ಲಿ ನ ಗದು ಎಂಟು ರೂಪಾಯಿ (ರಾಜಾ ಪುವಲಿಗಳು ಎರಡು)		
38	ಹವಳ, ಚಿನ್ನದ ಗುಂಡುಗಳು, ತಾಳಿ ವಗೈರೆ ಧಾರದಲ್ಲಿ ಪೋಣಿಸಿದ ಸರ ಒಂದು		
39	ಕೆಂಪು ರೇಷಮೆ ವಸ್ತ್ರ	..	1
40	ಹಿತ್ತಾಳಿ, ತಾಲಿ ಬಂದು		

ಬಿ. ತಿರುಮಲಾಚಾರ್,
ಫಸ್ಟ್ ಕ್ಲಾಸ್ ಮ್ಯಾಜಸ್ಟ್ರೇಟ್.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ತಾರೀಖು 27ನೇ ಮಾಹೆ ಏಪ್ರಿಲ್ 1903.

ಸ್ಯ 1903ನೇ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ ಮಾಹೆ ತಾರೀಖು 30ರ ವರಿಗೆ ಈ ಕೆಳಗಿನ ಎ. ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲ್ ಗೇಟುಗಳ ಮುಖಾಂತ ಸಿಟಿ ವಳಕ್ಕೆ ಬರುವ ಗಾಡಿಗಳು, ಜಾನವರುಗಳು, ವಗೈರೆಗಳ ಮೇಲೆ ಬಿ. ಷೆಡ್ಯೂಲಿನಲ್ಲಿ ನಮೂದಾಗುವ ದರದಂತೆ, ಸಿಟಿ ಮ್ಯುನಿಸಿಪಲ್ ರೆಗ್ಯುಲೇಷ್ಯ 49 ಮತ್ತು 51ನೇ ಸೆಕ್ಷನ್‌ಗಳಲ್ಲಿ ನಮೂದಿರುವ ಪ್ರಕಾರ ಸುಂಕಗಳನ್ನು ವಸೂಲ್ಮಾಡುವ ಬಾಬಿನ್ನು 1903ನೇ ಇಸವಿ ಮೇ ಮಾಹೆ ತಾರೀಖು 16ನೇ ಪುಧ್ಯಾನ್ಹ 1 ಘಂಟೆಯು ಲಾಗಾಯಿತು ರಂಗಾಚಾರ್ಲು ಯವರ ಮೆಮೋರಿಯಲ್ ಹಾಲಿನಲ್ಲಿ ಪ್ರೆಸಿಡೆಂಟರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ. ಷೆಡ್ಯೂಲಿನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ಒಳಕ್ಕೆ ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು. ಶಿವಾಯಿ ಪ್ರೆಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲ್ ಮಾಹೆ ತಾರೀಖು ನಿಶಿ ಟೋಲು ಪಾವತಿ ಮಾಡತಕ್ಕ ಆಸಾಮಿಗಳಿಗೆ ರಶೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲಿ ಮಂಜೂರು ಮಾಡುವ ಅಧಿಕಾರವು ಪ್ರೆಸಿಡೆಂಟರವರಲ್ಲಿರುತ್ತದೆ.

4. ಪ್ರತಿ ತಿಂಗಳು 10ನೇ ತಾರೀಖು ವಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಪಾವತಿ ಮಾಡಬೇಕು. ಹರಾಜು ಆಖೈರಾದ ಕೂಡಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹಿಗಳ ಖಿಸ್ತಿಗೆ ಸಮವಾದ ಮೊಬಲಗನ್ನು ಡಿಪಾಜಿಟ್ ಬಗ್ಗೆ ಹಾಜರ್ಮಾಡಬೇಕು. ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಆಖೈರಾದಕೂಡ್ಲೆ ಡಿಪಾಜಿಟ್ ಬಗ್ಗೆ ಮೊಬಲಗನ್ನು ಹಾಜರ್ಮಾಡದೇ ಇದ್ದರೆ, ಖರ್ಚಿಗೂ ಮತ್ತು ಉಕ್ಸಾನಿಗೆ ಅವ್ವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ ಪುನಹಾ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗನ್ನು ವಾಯಿದೆ ವಳಗೆ ಹಾಜರ್ಮಾಡಲು ತಪ್ಪಿದರೆ, ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗೆದುಕೊಂಡು, ಬಾಬನ್ನು ದುಸರಾ ಹರಾಜು ಮಾಡಿಸಿ, ಆದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವ್ವಲ್ ದರಖಾಸ್ತುದಾರನನ್ನು ಗುರಿಪಡಿಸುತ್ತೆ. ಎರಡನೇ ಹರಾಜಿನಲ್ಲಿ ನಫೆ ಬಂದಲ್ಲಿ, ಮೊದಲು ಕಂಟ್ರಾಕ್ಟುದಾರನಿಗೆ ನದರು ನಫೆಗೆ ಹಕ್ಕು ಇರುವದಿಲ್ಲ.